ಪಡಿಸಲಾದ ಪರಿವರ್ತಕಗಳನ್ನು ಅಳವಡಿಸಿದ ದಿನಾಂಕದಿಂದ 12 ತಿಂಗಳ ಅವಧಿಯ ಗ್ಯಾರಂಟಿಯನ್ನು ದುರಸ್ತಿದಾರರಿಂದ ಪಡೆಯಲಾಗುತ್ತಿದೆ.

ಪರಿವರ್ತಕ ದುರಸ್ತಿ ಕೇಂದ್ರದ ಗುಣಮಟ್ಟ ಸರಿಯಿಲ್ಲದಿದ್ದಲ್ಲಿ ದಂಡ ವಿಧಿಸುವುದರ ಜೊತೆಗೆ ಆ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಚರಿಸಲಾಗದ ರಸ್ತೆಗಳು

889 (1665); ಡಾ. ಮಾಲಕರೆಡ್ಡಿ ಎ. ಬಿ. (ಯಾದಗಿರಿ)

(ಅ) ಯಾದಗಿರಿ ವಿಧನಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳು (ಗ್ರಾಮೀಣ ಭಾಗದ ಹಾಗೂ ಪ್ರಮುಖ ರಸ್ತೆಗಳು) ತೀರಾ ಹಾಳಾಗಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹೀಗೆ 10 ವರ್ಷಗಳಿಂದಲೂ ದುರಸ್ತಿ ಕಾಣದೇ ಅನೇಕ ಪ್ರಮುಖ ರಸ್ತೆಗಳಲ್ಲಿ ಬಸ್‌ಗಳು ಸಂಚರಿಸದೇ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಸಾರ್ವಜನಿಕರ ಪ್ರತಿಭಟನೆ ವ್ಯಕ್ತವಾಗುತ್ತಿದ್ದರೂ ಸರ್ಕಾರ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು;

(ಈ) ಯಾದಗಿರಿ–ವಡಗೇರಾ–ತುಮಕೂರು ವರೆಗೆ (0.00–26.00 ಕಿ ಮೀ) ಹತ್ತಿಗುಡೂರ–ಸಂಗಮ್–ತುಮಕೂರು ವರೆಗೆ (0.00–32.00 ಕಿಮೀ) ಖಾನಾಪೂರ–ವಡಗೇರಾ (0.00–17.00 ಕಿಮೀ) ಈ ರಸ್ತೆಗಳು ತೀರಾ ಹಾಳಾಗಿದ್ದರೂ ಸರ್ಕಾರ ದುರಸ್ತಿ ಮಾಡಿಲ್ಲ ಏಕೆ;

(ಉ) ಯಾದಗಿರಿ ಭೀಮಾ ಬ್ರಿಜ್‌ನಿಂದ ತುಮಕೂರು ಮುಖ್ಯ ರಸ್ತೆಯಿಂದ ವಡಗೇರಾವರೆಗೆ ಬೈಪಾಸ್ ರಸ್ತೆ ನಿರ್ಮಾಣ ಮಾಡಲು ಸರ್ಕಾರ ಮುಂದಾಗುವುದೇ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಬಂದಿದೆ.

(ಇ) ಯಾದಗಿರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ 74.00 ಕಿ.ಮೀ. ಉದ್ದದ 3 ರಾಜ್ಯ ಹೆದ್ದಾರಿಗಳಿದ್ದು, (ರಾಜ್ಯ ಹೆದ್ದಾರಿ–15, 16 ಹಾಗೂ 127) ಇದರಲ್ಲಿ ಸಿಂದಗಿ–ಕೋಡಂಗಲ್ (ರಾಜ್ಯ ಹೆದ್ದಾರಿ–16, ಕಿ.ಮೀ. 83.00 ರಿಂದ 99.00 ರವರೆಗೆ) ರಸ್ತೆಯನ್ನು ಕೆ. ಆರ್. ಡಿ. ಸಿ. ಎಲ್. ರವರು ಕೈಗೆತ್ತಿಕೊಂಡು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ್ದಾರೆ ಹಾಗೂ ವನ ಮಾರಪಲ್ಲಿ–ರಾಯಚೂರು (ರಾಜ್ಯ ಹೆದ್ದಾರಿ–15) ರಸ್ತೆಯಲ್ಲಿ 3.00 ಕಿ. ಮೀ. (ಕಿ. ಮೀ. 260.00 ರಿಂದ 263.00 ರವರೆಗೆ) ಅಭಿವೃದ್ಧಿಪಡಿಸಬೇಕಾಗಿದೆ.

ಯಾದಗಿರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ 18 ಜಿಲ್ಲಾ ಮುಖ್ಯ ರಸ್ತೆಗಳಿದ್ದು, ಅವುಗಳ ಒಟ್ಟು ಉದ್ದ 263.54 ಕಿ. ಮೀ. ಇರುತ್ತದೆ. ಇದರಲ್ಲಿ 122.20 ಕಿ. ಮೀ. ಉದ್ದದ ರಸ್ತೆಯನ್ನು ಸುಧಾರಣೆ ಮಾಡಲಾಗಿದ್ದು ಇನ್ನುಳಿದ 144.34 ಕಿ. ಮೀ. ಉದ್ದದ ರಸ್ತೆಯು ತುಂಬಾ ಹಾಳಾಗಿದೆ. ಈ ಹಾಳಾದ ರಸ್ತೆಯನ್ನು ಪ್ರಸಕ್ತ ಸಾಲಿನಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಸುಧಾರಣೆ ಕೈಗೊಳ್ಳಲು ಯೋಜನೆ ಹಾಕಿಕೊಳ್ಳಲಾಗಿದೆ.

(ಈ) 1) ಯಾದಗಿರಿ ವಡಗೇರಾ–ತುಮಕೂರು ವರೆಗೆ (0.00 ರಿಂದ 26.00 ಕಿಮೀ) (ಕಿ. ಮೀ. 16.70 + 9.30) = 26.00: ಕಿ. ಮೀ. 0.00 ರಿಂದ 10.00 ರವರೆಗೆ `1100.00 ಲಕ್ಷಗಳ ಅಂದಾಜು ಮೊತ್ತ ದೊಂದಿಗೆ 2013–14ನೇ ಸಾಲಿನ ಲೆಕ್ಕಶೀರ್ಷಿಕೆ 5054 ಅಪೆಂಡಿಕ್ಸ್–ಈ ರಡಿಯಲ್ಲಿ ಮಂಜೂರಾಗಿರುತ್ತದೆ. ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಆರ್ಥಿಕ ಬಿಡ್ ಅನುಮೋದನೆ ಹಂತದಲ್ಲಿರುತ್ತದೆ. ಬಾಕಿ ಉಳಿದ 16.60 ಕಿ.ಮೀ. ರಸ್ತೆಯು ಹಾಳಾಗಿದ್ದು, 2014–15ನೇ

ಸಾಲಿನಲ್ಲಿ ಅನುದಾನ ಲಭ್ಯತೆಯಾನುಸಾರ ರಸ್ತೆಯನ್ನು ಅಭಿವೃದ್ಧಿಪಡಿಸಲಾ ಗುವುದು.

2) ಹತ್ತಿಗುಡೂರ–ಸಂಗಮವ–ತುಮಕೂರು ವರೆಗೆ (0.00 ರಿಂದ 32.00 ಕಿ. ಮೀ) ಹತ್ತಿಗುಡೂರು–ತುಮಕೂರು ಜಿಲ್ಲಾ ಮುಖ್ಯ ರಸ್ತೆ 24.50 ಕಿ.ಮೀ. ಹಾಗೂ ತುಮಕೂರು–ಸಂಗಮ್ ರಸ್ತೆ 15.00 ಕಿ. ಮೀ. ಇದ್ದು, ಇದರಲ್ಲಿ ತುಮಕೂರು–ಸಂಗಮ್ ರಸ್ತೆ 15.00 ಕಿ. ಮೀ. ಮರು ಡಾಂಬರೀಕರಣ ಮಾಡಲಾಗಿದೆ. ಹತ್ತಿಗುಡೂರು–ತುಮಕೂರು ರಸ್ತೆಯ ಒಟ್ಟು 24.50 ಕಿ.ಮೀ. ಇದ್ದು, ಇದರಲ್ಲಿ 2.50 ಕಿ. ಮೀ. 2014–15ನೇ ಸಾಲಿನ ಎಸ್. ಡಿ. ಪಿ. ಅನುದಾನದಡಿಯಲ್ಲಿ ಅಭಿವೃದ್ಧಿ ಪಡಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ. ಉಳಿದ 22.00 ಕಿ. ಮೀ. ಹಾಳಾಗಿದ್ದು, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾಗಿದೆ.

3) ಖಾನಾಪೂರ–ವಡಗೇರಾ ರಸ್ತೆ (0.00 ರಿಂದ 17.00 ಕಿ. ಮೀ) : ಖಾನಾಪೂರ–ಕುರಕುಂದಾ ಜಿಲ್ಲಾ ಮುಖ್ಯ ರಸ್ತೆ 6.00 ಕಿ.ಮೀ., ಮರಕಲ್–ಕೊಳ್ಳೂರ–ಬಿಳ್ಹಾರ ರಸ್ತೆ 11.00 ಕಿ. ಮೀ. ವಡಗೇರಾ ವರೆಗೆ ಇದ್ದು, ಸದರಿ ರಸ್ತೆಯಲ್ಲಿ 14.00 ಕಿ. ಮೀ. ಮರುಡಾಂಬರೀಕರಣ ಮಾಡಲಾಗಿದೆ. ಬಾಕಿ ಉಳಿದ 3.00 ಕಿ. ಮೀ. ಅಭಿವೃದ್ಧಿಪಡಿ ಸಬೇಕಾಗಿದೆ.

ಈ ಹಾಳಾಗಿರುವ ರಸ್ತೆಯ ಭಾಗಗಳನ್ನು ಪ್ರಸಕ್ತ ಸಾಲಿನಲ್ಲಿ ಅನುದಾನದ ಲಭ್ಯತೆಗನುಗುಣವಾಗಿ ಸುಧಾರಣೆ ಕೈಗೊಳ್ಳಲು ಯೋಜನೆ ಹಾಕಿಕೊಳ್ಳಲಾಗಿದೆ.

(ಈ) ವಡಗೇರಾ ಬೈಪಾಸ್ ರಸ್ತೆ ಕಾಮಗಾರಿಯ `850.00 ಲಕ್ಷಗಳ ಅಂದಾಜು ಪಟ್ಟಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.